RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ



| ಭಾಗ–I<br>Part–I | ಬೆಂಗಳೂರು, ಶನಿವಾರ, ಮೇ ೨೦, ೨೦೧೭ (ವೈಶಾಖ ೩೦, ಶಕ ವರ್ಷ ೧೯೩೯)<br>Bengaluru, Saturday, May 20, 2017 (Vyshaka 30, Shaka Varsha 1939) | ನಂ. ೪೩೪<br>No. 434 |
|---|---|---|



ಶಿಕ್ಷಣ ಸಚಿವಾಲಯ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾವಣೆಯೊಂದಿಗೆ ಹೊಸ ವೃಂದ ಮತ್ತು ವೃಂದ ಬಲ ನಿರ್ಧರಿಸುವ ಕುರಿತು.

ಓದಲಾಗಿದೆ:

1) ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967 – ಅಧಿಸೂಚನೆ ಸಂಖ್ಯೆ: ಜಿಎಡಿ 53 ಓಆರ್ಆರ್ 64; ದಿನಾಂಕ:22.02.1967.
2) ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2001 – ಅಧಿಸೂಚನೆ ಸಂಖ್ಯೆ: ಡಿಪಿಎಆರ್ 41 ಎಸ್ಆರ್ಇ 2001; ದಿನಾಂಕ:09.08.2001.
3) ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 502 ಸೇ–3/ 2011; ದಿನಾಂಕ:13.04.2011.
4) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ಅಧಿಸೂಚನೆ ಸಂಖ್ಯೆ: ಎಫ್ ಸಂಖ್ಯೆ :03/20/2010/ಎನ್.ಸಿ.ಟಿ.ಇ.(ಎನ್&ಎಸ್) ದಿ:23.08.2010.
5) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ಅಧಿಸೂಚನೆ ಸಂಖ್ಯೆ: ಎಫ್ ಸಂಖ್ಯೆ:61–1/2011/ಎನ್.ಸಿ.ಟಿ.ಇ.(ಎನ್&ಎಸ್) ದಿ:29.07.2011.
6) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ಅಧಿಸೂಚನೆ ಸಂಖ್ಯೆ: ಎಫ್ ಸಂಖ್ಯೆ:62–1/2012/ಎನ್.ಸಿ.ಟಿ.ಇ.(ಎನ್&ಎಸ್) ದಿ:12.11.2014.
7) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014; ದಿನಾಂಕ:31.01.2015.

ಪ್ರಸ್ತಾವನೆ:–

ಮೇಲೆ (1)ರಲ್ಲಿ ಓದಲಾದ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ರಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ವೃಂದವನ್ನು ನಿಗಧಿಪಡಿಸಿದ್ದು, ಅದರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಸಹ ಶಿಕ್ಷಕ / ಶಿಕ್ಷಕಿ, ಎ.ವಿ. ಬೋರ್ಡಿಂಗ್ ಹೋಂಗಳು ಮತ್ತು ಡಿ.ಸಿ. ಹಾಸ್ಟೆಲ್‌ಗಳ ವಾರ್ಡನ್‌ಗಳು, ಮಹಿಳೆಯರ ವೃತ್ತಿಪರ ಸಂಸ್ಥೆಗಳ ಮೇಟ್ರನ್‌ಗಳು ಸೇರಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ನಂತರದ ತಿದ್ದುಪಡಿ ನಿಯಮಗಳು 2001ರಲ್ಲಿ ಹೆಸರನ್ನು ಪ್ರಾಥಮಿಕ ಶಾಲಾ ಸಹ ಶಿಕ್ಷಕರು / ಶಿಕ್ಷಕಿಯರೆಂದು ಬದಲಾಯಿಸಿ, ಸಾಮಾನ್ಯ, ವಿಜ್ಞಾನ, ಇಂಗ್ಲೀಷ್ ಮತ್ತು ಹಿಂದಿ ವಿಷಯಗಳಿಗೆ 4 ವರ್ಗಗಳನ್ನು ಸೃಜಿಸಲಾಗಿದೆ. 1967ರ ನಿಯಮಗಳು ಹಾಗೂ ತಿದ್ದುಪಡಿ ನಿಯಮಗಳು, 2001ರಲ್ಲಿ ಈ ವೃಂದಕ್ಕೆ ಅಗತ್ಯವಿರುವ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನವನ್ನು ನಿಗಧಿಪಡಿಸಲಾಗಿದೆ.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ.) ಮೇಲೆ (4), (5) ಮತ್ತು (6)ರಲ್ಲಿ ಓದಲಾದ ಅಧಿಸೂಚನೆಗಳನ್ವಯ 1 ರಿಂದ 5ನೇ ತರಗತಿಗಳಿಗೆ ನೇಮಿಸಬೇಕಾದ ಶಿಕ್ಷಕರು ಮತ್ತು 6 ರಿಂದ 8ನೇ ತರಗತಿಗಳಿಗೆ ನೇಮಿಸಬೇಕಾದ ಶಿಕ್ಷಕರುಗಳ ವಿದ್ಯಾರ್ಹತೆಗಳನ್ನು ನಿಗಧಿಪಡಿಸಿದೆ. ಈ ಅಧಿಸೂಚನೆಗಳನ್ನು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ 2009 (ಆರ್.ಟಿ.ಇ. ಅಧಿನಿಯಮ)ದ ಸೆಕ್ಷನ್-23ರ ಉಪಸೆಕ್ಷನ್ (1), ಎನ್.ಸಿ.ಟಿ.ಇ. ಅಧಿನಿಯಮ 1993ರ ಸೆಕ್ಷನ್-32ರ ಉಪಸೆಕ್ಷನ್ (2)ರ ಕ್ಲಾಸ್ (ಡಿಡಿ) ಯೊಂದಿಗೆ ಸೆಕ್ಷನ್-12 ಓದಿಕೊಂಡಂತೆ ಮತ್ತು ಭಾರತ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಎಸ್.ಓ.750(ಇ) ದಿನಾಂಕ:31.03.2010ರನ್ವಯ ಹೊರಡಿಸಲಾಗಿದೆ. ಆರ್.ಟಿ.ಇ. ಅಧಿನಿಯಮ 2009 ಮತ್ತು ಎನ್.ಸಿ.ಟಿ.ಇ. ಅಧಿನಿಯಮ 1993ರ ಅವಕಾಶಗಳನ್ವಯ ಎಲ್ಲಾ ಪ್ರಾಥಮಿಕ ಶಾಲೆಗಳ ನೇಮಕಾತಿಗಳಲ್ಲಿ ಎನ್.ಸಿ.ಟಿ.ಇ. ನಿಗಧಿಪಡಿಸಿದ ವಿದ್ಯಾರ್ಹತೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಮೇಲೆ (1) ಮತ್ತು (2)ರಲ್ಲಿ ಓದಲಾದ 1967ರ ನಿಯಮಗಳು ಮತ್ತು 2001ರ ತಿದ್ದುಪಡಿ ನಿಯಮಗಳಲ್ಲಿ ನಿಗಧಿಪಡಿಸಲಾದ ವಿದ್ಯಾರ್ಹತೆಗಳು ಎನ್.ಸಿ.ಟಿ.ಇ. ನಿಗಧಿಪಡಿಸಿದ ವಿದ್ಯಾರ್ಹತೆಗಳಿಗೆ ಅನುಗುಣವಾಗಿರುವುದಿಲ್ಲ ಎಂಬುದನ್ನು ಗಮನಿಸಲಾಗಿದೆ. ಆದುದರಿಂದ 1967ರ ನಿಯಮಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಗತ್ಯವಿದೆ.

ಮೇಲೆ (3)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ಮಂಜೂರಾದ ಹುದ್ದೆಗಳ ವೃಂದ ಬಲವನ್ನು ನಿಗಧಿಪಡಿಸಿದ್ದು, ಕಡ್ಡಾಯ ಶಿಕ್ಷಣ ಹಕ್ಕು (ಆರ್.ಟಿ.ಇ.) ಅಧಿನಿಯಮದ ಮಾನದಂಡಗಳ ಪ್ರಕಾರ ಪ್ರಸ್ತುತ ಮಂಜೂರಾದ ಹುದ್ದೆಗಳ ಸಂಖ್ಯೆ 2011ರಲ್ಲಿ ನಿಗಧಿಪಡಿಸಿದ್ದ ಹುದ್ದೆಗಳಿಗೆ ವ್ಯತ್ಯಾಸವಿರುತ್ತದೆ.

ಆರ್.ಟಿ.ಇ. ಅಧಿನಿಯಮವು 6 ರಿಂದ 8 ನೇ ತರಗತಿಗಳಲ್ಲಿ ಭಾಷೆ, ಗಣಿತ ಮತ್ತು ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳಿಗೆ ಕನಿಷ್ಠ ಪ್ರತ್ಯೇಕ ಒಬ್ಬ ಶಿಕ್ಷಕರಿರುವುದನ್ನು ಕಡ್ಡಾಯಗೊಳಿಸಿದೆ. ಈ ಶಿಕ್ಷಕರುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಗಳು 1 ರಿಂದ 5ನೇ ತರಗತಿಗಳ ಶಿಕ್ಷಕರ ವಿದ್ಯಾರ್ಹತೆಗಳಿಗಿಂತ ಉನ್ನತಮಟ್ಟದ್ದಾಗಿದೆ.

ಮೇಲೆ (7)ರಲ್ಲಿ ಓದಲಾದ ಆದೇಶದಲ್ಲಿ "ಪ್ರಾಥಮಿಕ ಶಾಲಾ ಪದವೀಧರ ಸಹ ಶಿಕ್ಷಕರು / ಶಿಕ್ಷಕಿಯರು" ಎಂಬ ಹೊಸ ವೃಂದವನ್ನು ಸೃಜಿಸಲಾಗಿತ್ತು. ಆ ವೃಂದಕ್ಕೆ 2015 ಮತ್ತು 2016ನೇ ಸಾಲಿನಲ್ಲಿ ನೇಮಕಾತಿ ನಡೆಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014; ಬೆಂಗಳೂರು ದಿನಾಂಕ:19-05-2017**

1) 'ಪ್ರಾಥಮಿಕ ಶಾಲಾ ಸಹ ಶಿಕ್ಷಕ / ಶಿಕ್ಷಕಿ' ವೃಂದದ ಪದನಾಮವನ್ನು "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿಗಳ)" ಎಂದು ಪದನಾಮಿಕರಿಸಿದೆ. ಈ ವೃಂದವು ಎರಡು ವರ್ಗಗಳನ್ನು ಒಳಗೊಂಡಿರುತ್ತದೆ:-

    (1) ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು), ಮತ್ತು

    (2) ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ & ವಿಜ್ಞಾನ)

2) ಪ್ರಸ್ತುತ 'ಪ್ರಾಥಮಿಕ ಶಾಲಾ ಸಹ ಶಿಕ್ಷಕರು/ಶಿಕ್ಷಕಿಯರು' ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಪುನರ್ ಪದನಾಮಿಕರಿಸಿದ ನಂತರ "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿಗಳ)" ವೃಂದದಲ್ಲಿಡಲಾಗುವುದು. ಮುಂದುವರೆದು ಇವರನ್ನು ಎರಡು ವರ್ಗಗಳಲ್ಲಿ ಅಂದರೆ

    (i) ಪ್ರಾಥಮಿಕ ಶಾಲಾ ಶಿಕ್ಷಕರು (ಸಾಮಾನ್ಯ), ಮತ್ತು

    (ii) ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ & ವಿಜ್ಞಾನ)

ಎಂದು ವಿಂಗಡಿಸಲಾಗುವುದು.

3) ಪುನರ್ ಪದನಾಮಿಕರಣದ ನಂತರ "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿಗಳ)" ನ್ನು 6 ರಿಂದ 8ನೇ ತರಗತಿಗಳಿಗೆ ಬೋಧಿಸಲು ಸಹ ಸೂಚಿಸಬಹುದಾಗಿದೆ.

4) "ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ) ಎಂಬ ಹೊಸ ವೃಂದವನ್ನು ಸೃಜಿಸಲಾಗಿದೆ. ಈ ವೃಂದಲ್ಲಿ ಮೂರು ವರ್ಗಗಳಿರುತ್ತವೆ;-

    (i) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು),

    (ii) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ & ವಿಜ್ಞಾನ), ಮತ್ತು

    (iii) ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಸಮಾಜ ವಿಜ್ಞಾನ)

5) "ಪ್ರಾಥಮಿಕ ಶಾಲಾ ಪದವೀಧರ ಸಹ ಶಿಕ್ಷಕರು / ಶಿಕ್ಷಕಿಯರು" ವೃಂದವನ್ನು ಹೊಸ "ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ)" ವೃಂದದಲ್ಲಿ ವಿಲೀನಗೊಳಿಸಲಾಗುವುದು.

6) ಪ್ರಸ್ತುತ ಇರುವ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿ, ಎನ್.ಸಿ.ಟಿ.ಇ. ನಿಗದಿಪಡಿಸಿದ ವಿದ್ಯಾರ್ಹತೆಯ ಮಾನದಂಡಗಳಿಗೆ ಅನುಗುಣವಾಗಿ ಜಾರಿಗೊಳಿಸಲಾಗುವುದು.

7) 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಪ್ರಾಥಮಿಕ ಶಾಲೆಗಳ ಮಂಜೂರಾದ ವಿವಿಧ ವೃಂದ ಬಲವನ್ನು ಈ ಕೆಳಗಿನಂತೆ ನಿಗಧಿಪಡಿಸಿದೆ.

| ಕ್ರ ಸಂ. | ವೃಂದ | ಮಂಜೂರಾದ ವೃಂದ ಬಲ |
|---|---|---|
| 1 | ಹಿರಿಯ ಮುಖ್ಯ ಶಿಕ್ಷಕರು | 1842 |
| 2 | ಮುಖ್ಯ ಶಿಕ್ಷಕರು | 15413 |
| 3 | ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿಗಳ) | 108915 |
| 4 | ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ) | 52630 |
| 5 | ದೈಹಿಕ ಶಿಕ್ಷಣ ಶಿಕ್ಷಕರು ಹಿರಿಯ ಶ್ರೇಣಿ-II ಮತ್ತುದರ್ಜೆ-II | 6772 |
| 6 | ಸಂಗೀತ ಶಿಕ್ಷಕರು | 259 |
| 7 | ಚಿತ್ರಕಲಾ ಶಿಕ್ಷಕರು | 224 |
| 8 | ನರ್ಸರಿ ಶಾಲಾ ಶಿಕ್ಷಕರು (ಎನ್.ಎಸ್.ಟಿ) | 2485 |
| | **ಒಟ್ಟು** | **188540** |

8) ಮಂಜೂರಾದ ಹುದ್ದೆಗಳ ಜಿಲ್ಲಾವಾರು ಹಂಚಿಕೆಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ನಿರ್ವಹಿಸುವರು.

9) ಪುನರ್ ಪದನಾಮಿಕರಣ ಮಾಡಿದ "ಪ್ರಾಥಮಿಕ ಶಾಲಾ ಶಿಕ್ಷಕರ (1 ರಿಂದ 5ನೇ ತರಗತಿಗಳ)" ವೃಂದದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯು, ಈ ಆದೇಶದಲ್ಲಿ ನಿಗಧಿಪಡಿಸಿದ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿದೆ. ಈ ಹೆಚ್ಚುವರಿ ಶಿಕ್ಷಕರನ್ನು ಅದೇ ವೃಂದದಲ್ಲಿ ಅವರು ನಿವೃತ್ತಿಯಾಗುವವರೆಗೆ ಅಥವಾ "ಪದವೀಧರ ಪ್ರಾಥಮಿಕ ಶಿಕ್ಷಕರು" (6 ರಿಂದ 8ನೇ ತರಗತಿಗಳ) ವೃಂದಕ್ಕೆ ಆ ವೃಂದದ ನೇಮಕಾತಿ ಮಾನದಂಡಗಳ ಅನುಸಾರ ಸೇವಾನಿರತ ಶಿಕ್ಷಕರ ನೇಮಕಾತಿ ಆಗುವವರೆಗೆ ಮುಂದುವರೆಸಲಾಗುವುದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 63 ಸೇನಿಡಿ 2017; ದಿನಾಂಕ:04.05.2017 ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 329 ಸೇ-3/2017; ದಿನಾಂಕ:05.05.2017 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

**ರೇವಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 200